ವ್ಯಕ್ತಿಪೂಜೆಯ ಸಾಧ್ಯತೆಯನ್ನು ಅಲ್ಲಗಳೆದವು. ನವ್ಯರ ಬರವಣಿಗೆಯಲ್ಲಿದ್ದ ಮಿತವ್ಯಯ, ಸಂಯಮ ಮತ್ತು ಅನಗತ್ಯವಾಗಿ ಮಾತಾಡದೆ ಇರುವುದು ಇವುಗಳಿಂದ ನಾನು ಆಕರ್ಷಿತನಾಗಿದ್ದೆ. ಜೊತೆಗೆ ವಿಮರ್ಶೆಗೆ ಅವರು ಬಳಸುತ್ತಿದ್ದ ವಿಧಾನಗಳು, ಈ ವಿಧಾನಗಳ ಹಿಂದೆ ಇದ್ದಂಥ ಲೋಕದೃಷ್ಟಿ ಮತ್ತು ನವ್ಯತೆಯೊಂದೇ ಸತ್ಯ ಎಂಬ ಅವರ ಧೋರಣೆಗಳನ್ನು ಸ-ವಿಮರ್ಶಕವಾಗಿ ಗಮನಿಸುತ್ತಿದ್ದೆ. ಎ.ಆರ್. ಕೃಷ್ಣಶಾಸ್ತ್ರಿಗಳ ವಿಮರ್ಶೆ, ಕುವೆಂಪು ವಿಮರ್ಶೆ, ಬೇಂದ್ರೆಯವರ ಸಾಹಿತ್ಯ ಮೀಮಾಂಸೆ ಎಲ್ಲವೂ ಇಷ್ಟವಾಗುತ್ತಿತ್ತು. ಸಾಹಿತ್ಯ ವಿಮರ್ಶೆಯ ಭಾಷೆ ಹೇಗಿರಬೇಕು ಎಂಬುದನ್ನು ಕೇವಲ ನವ್ಯರಿಂದ ಮಾತ್ರವಲ್ಲ, ಇವರೆಲ್ಲರಿಂದಲೂ ನಾನು ಕಲಿತೆ. ದೇವರಾಜ ಅರಸರು ಮಾಡಿದ ಕೆಲಸ, ಬಿ. ಬಸವಲಿಂಗಪ್ಪನವರ ಕೆಲಸ ಇವು ಕೂಡ ನನ್ನ ಸಾಮಾಜಿಕ ತಿಳಿವಳಿಕೆ, ತಾತ್ವಿಕ ತಿಳಿವಳಿಕೆಗಳನ್ನು ಪೋಷಿಸಿದವು. ಇವೆಲ್ಲವೂ ಸೇರಿಕೊಂಡು ಕೆಲವು ಮಾದರಿಗಳು ನನಗೆ ದಕ್ಕಿದವು ಎನಿಸುತ್ತದೆ. ನನ್ನ ಸಮಕಾಲೀನರ ಮಾದರಿಗಳೂ ನನ್ನೆದುರಿದ್ದವು. ಕಿ.ರಂ. ನಾಗರಾಜ, ಕೆ.ವಿ. ನಾರಾಯಣ, ಹೀಗೆ ಅನೇಕರ ಬರಹಗಳು ಕೂಡ ನನ್ನೆದುರಿದ್ದವು. ನನ್ನ ಇಂಥ ಜೊತೆಗಾರರಿಂದಲೂ ನಾನು ಕಲಿತೆ. ವಿಮರ್ಶಾ ಮಾದರಿಗಳನ್ನು ಅನುಕರಿಸುವುದು ಅಥವಾ ಅನುಸರಿಸುವುದರಲ್ಲಿ ನನಗೆ ಅಂಥ ನಂಬಿಕೆಯಿಲ್ಲ. ಇವೆಲ್ಲವುಗಳನ್ನು ಬಳಸಿಕೊಂಡು ವಿಮರ್ಶಾ ಮಾದರಿಗಳನ್ನು ಸೃಷ್ಟಿಸುವುದಿದೆಯಲ್ಲ ಅಥವಾ ಸ್ವತಃ ನಾವು ರೂಪುಗೊಳ್ಳುವ ಕ್ರಮವಿದೆಯಲ್ಲ, ಆ ಬಗೆಗೆ ನಾನು ಆಸಕ್ತನಾದವನು. ಒಬ್ಬ ಕವಿ, ಕತೆಗಾರ ತಾನು ಬರೆಯುವ ಕ್ರಮಗಳನ್ನು ಹೇಗೆ ಕಂಡುಕೊಳ್ಳುತ್ತಾನೊ/ಳೊ ಹಾಗೆಯೇ ವಿಮರ್ಶಕ ಕೂಡ ತನ್ನ ಬರೆಯುವ ಕ್ರಮಗಳನ್ನು ಕಂಡುಕೊಳ್ಳಬೇಕು. ನನ್ನದೇ ಆದ ಒಂದು ಶೈಲಿ ಇರಬೇಕು ಅನ್ನುವ ಅಪೇಕ್ಷೆ ಇತ್ತು ಎನಿಸುತ್ತದೆ. ನಾನು ಪಾಠ ಮಾಡಿದ್ದು ಪದವಿ ತರಗತಿಯ ವಿದ್ಯಾರ್ಥಿಗಳಿಗೆ. ಹೀಗಾಗಿ ಸಂವಹನವಾಗುವ ಬಗೆ ಬಗ್ಗೆ ಸದಾ ಎಚ್ಚರದಿಂದ ಇರುತ್ತಿದ್ದೆ. ಅದು ಸೆಮಿನಾರುಗಳ ಕಾಲ. ಜಿ.ಎಸ್. ಶಿವರುದ್ರಪ್ಪ ಅವರು ನಮ್ಮನ್ನು ಬರವಣಿಗೆಗೆ ತೊಡಗುವಂತೆ ಮಾಡಿದ್ದಲ್ಲದೆ ಮಾತನಾಡುವಂತೆಯೂ ಮಾಡಿದರು. ಹೀಗಾಗಿ ನನಗೆ ವೈಯಕ್ತಿಕವಾಗಿ ಮಾತಾಡುವ ಶೈಲಿ ಮತ್ತು ಬರೆಯುವ ಶೈಲಿ ಒಂದೇ ಆಗಿರಬೇಕೆ? ಅಥವಾ ಇಲ್ಲವೆ? ಎಂಬ ಪ್ರಶ್ನೆ ಕೂಡ ಕಾಡಿತು. ನಾವು ಮಾತಾಡಿದ್ದನ್ನು ಕಡ್ಡಾಯವಾಗಿ ಬರೆದುಕೊಡಬೇಕಾಗಿತ್ತು. ಯಾಕೆಂದರೆ ಅದು ಪುಸ್ತಕ ರೂಪದಲ್ಲೂ ಪ್ರಕಟವಾಗುತ್ತಿತ್ತು. ಈ ಎಲ್ಲಾ ಅಂಶಗಳು ಕೂಡ ನನ್ನ ವಿಮರ್ಶೆಯನ್ನು ಪ್ರಭಾವಿಸಿದವು.

ಸಾಹಿತ್ಯವಿಮರ್ಶೆಯಲ್ಲಿ ಆಶಯ ಮತ್ತು ಆಕೃತಿಗಳ ನಡುವೆ ಇರುವ ಅವಿನಾಸಂಬಂಧದಲ್ಲಿ ನನಗೆ



ನಂಬಿಕೆಯಿದೆ. ಬೇರೆ ಬೇರೆ ಸಾಹಿತ್ಯಪ್ರಕಾರಗಳು ತಮ್ಮದೇ ಪ್ರತ್ಯೇಕ ಮೀಮಾಂಸೆಯನ್ನು ಹೊಂದಿರುತ್ತವೆಯೆಂದು ನನ್ನ ತಿಳಿವಳಿಕೆ. ಸಾಹಿತ್ಯದ ಮಾಧ್ಯಮವಾದ ಭಾಷೆಯ ಹಲವು ನೆಲೆಗಳು, ತಮ್ಮ ಸೃಜನಶೀಲ ವಿಶಿಷ್ಟತೆಯಲ್ಲಿ ಆಕೃತಿಗಳನ್ನು ರೂಪಿಸುವ ಬಗೆಯಲ್ಲಿ ಆಶಯಗಳೂ ಅಡಗಿರುತ್ತವೆ. ನಮ್ಮ ವ್ಯಕ್ತಿತ್ವದ ಅಪ್ರಜ್ಞಾಪೂರ್ವಕ ನೆಲೆಗಳು ಸಾಹಿತ್ಯಸೃಷ್ಟಿಯಲ್ಲಿ ಖಚಿತವಾದ ಪಾತ್ರ ವಹಿಸುತ್ತವೆ.

**◆ 'ಈ ಎಡಪಂಥೀಯ ಚಿಂತನಾ ವಿಧಾನ ಕುರಿತು ಉಂಟಾದ ಭ್ರಮನಿರಸನದಿಂದ ನಾವು ಕಟ್ಟಿದ**